ಕಮೂ ಕಂಡಂತೆ ಕೋವಿಡ್ ಕಾಲಕನ್ನಡಿ

ಆಸ್ಪತ್ರೆಯ ಗೋಡೆ ಮೇಲೆ ಆಕ್ಸಿಜನ್ ಪಾಠ

ಹೇಳುವ ಮೂಲಕ ಸಭೆ ಬರ್ಖಾಸ್ತುಗೊಂಡಿತು.

ಬೆಡ್ ಬ್ಲಾಕಿಂಗ್, ರೆಮ್‌ಡಿಸಿವರ್ ಮಾರಾಟದ ಕಾಳದಂಧೆ ಕುರಿತೂ ಸಭೆಯಲ್ಲಿ ಪ್ರಸ್ತಾಪವಾಯಿತು ಎಂದೆನಲ್ಲ. ಅದರ ಕುರಿತು ಸಣ್ಣ ವಿವರಣೆಯನ್ನು ನಿಮಗೆ ನೀಡಲೇಬೇಕು. ಮನೆ ಆರೈಕೆಯಲ್ಲಿರುವ ರೋಗಿಯ ಹೆಸರಿನಲ್ಲಿ ಬೆಡ್ ಕಾದಿರಿಸಿ, ಅಗತ್ಯವಿರುವ ಬೇರೆ ಯಾರಿಗೋ ಅದನ್ನು ಮಾರುವುದು ಈ ಬೆಡ್ ಬ್ಲಾಕಿಂಗ್ ದಂಧೆ (ಇಂತಹ ದಂಧೆ ಕುರಿತು ಜಗತ್ತಿನ ಎಲ್ಲಿಯಾದರೂ ಕೇಳಿದ್ದೀರಾ?). ಅದರಲ್ಲಿ ಜನಪ್ರತಿನಿಧಿಗಳೂ ಭಾಗಿಯಾಗಿದ್ದನ್ನು ಕೇಳಿ ಜನ ಬೆಚ್ಚಿಬಿದ್ದರು. ತಾಹು ಈ ವಿಷಯವಾಗಿಯೂ ಟಿಪ್ಪಣಿ ಬರೆದಿರುವುದು ನಿಜವಾದರೂ ಹೊಲಸು ರಾಜಕೀಯದ ಪ್ರಸ್ತಾಪವನ್ನು ಈ ನಿರೂಪಕ ಮಾಡದಿರಲು ನಿರ್ಧರಿಸಿದ್ದಾನೆ. ಸರದಿಯಲ್ಲಿ ಕಾಯುತ್ತಾ ನಿಂತಿದ್ದ ಹಿರಿಯ ನಾಗರಿಕರಿಗೆ ವ್ಯಾಕ್ಸಿನ್ ನೀಡದೆ ವಾಪಸ್ ಕಳಿಸಿ, ಹಾಗೆ ಉಳಿಸಿಕೊಂಡಿದ್ದ ವ್ಯಾಕ್ಸಿನ್ ವಯಲ್‌ಗಳನ್ನು ಕೆಲವು ಸರ್ಕಾರಿ ವೈದ್ಯರು, ನರ್ಸ್‌ಗಳು ಮನೆಗೆ ಒಯ್ಯುತ್ತಿದ್ದರು. ಹಣ ಕೊಟ್ಟವರಿಗೆ ಮನೆಯಲ್ಲೇ ಲಸಿಕೆ ಹಾಕುತ್ತಿದ್ದರು. ಆಸ್ಪತ್ರೆಗಳ ಒಳಗಡೆ ರೋಗಿಗಳಿಗೆ ಸಿಗದ ರೆಮ್‌ಡಿಸಿವರ್ ಔಷಧಿಯನ್ನು ಮಾರುವ ಕಾಳಸಂತೆಗಳಾಗಿ ಅದೇ ಆಸ್ಪತ್ರೆಗಳ ಹೊರ ಆವರಣಗಳು ಮಾರ್ಪಾಡಾದವು.

ನಗರದ ಒಂದು ಪ್ರದೇಶದಿಂದ ಮತ್ತೊಂದಕ್ಕೆ ಆಂಬುಲೆನ್ಸ್‌ಗಳು ಸೈರನ್ ಸದ್ದು ಮೊಳಗಿಸುತ್ತಾ ತೆರಪಿಲ್ಲದಂತೆ ಓಡಾಡಿದವು. ಕೋವಿಡ್ ಮಾರಿಯ ನಿರ್ಭಾವುಕ ಕರೆಯನ್ನು ಕಿವಿಗೆ ಮುಟ್ಟಿಸುತ್ತಿದ್ದ ಆಂಬುಲೆನ್ಸ್‌ನ ಕರ್ಕಶ ಕೂಗು ಮತ್ತೆ ಯಾರದೋ ಸರದಿ ಬಂದಿದೆ ಎಂಬುದನ್ನು ಮನವರಿಕೆ ಮಾಡಿಕೊಡುತ್ತಿತ್ತು. ಸಿನಿಮಾ ಮಂದಿರಗಳ ಮುಂದೆ ಹಾಕುತ್ತಿದ್ದ 'ಹೌಸ್‌ಫುಲ್' ಬೋರ್ಡ್‌ನಂತೆ, ಆಸ್ಪತ್ರೆಗಳ ಮುಂದೆ 'ಬೆಡ್‌ಗಳು ಖಾಲಿ ಇಲ್ಲ' ಎಂಬ ಬೋರ್ಡ್‌ಗಳು ನೇತಾಡತೊಡಗಿದವು. ಆಸ್ಪತ್ರೆ ಮುಂದೆನಿಂತ ಆಂಬುಲೆನ್ಸ್‌ನಲ್ಲಿ ಮಲಗಿದ್ದವರು ಒಳಗಿನ ಬೆಡ್‌ಗಾಗಿ, ಆಸ್ಪತ್ರೆಯೊಳಗೆ ಬೆಡ್ ಮೇಲೆ ಮಲಗಿದ್ದವರು ಆಕ್ಸಿಜನ್‌ಗಾಗಿ, ಆಕ್ಸಿಜನ್ ಮೇಲೆ ಇದ್ದವರು ಐಸಿಯು ಬೆಡ್‌ಗಾಗಿ ಒದ್ದಾಡಿದರು. ಐಸಿಯು ಸೇರಿದ ಹಲವು ರೋಗಿಗಳು ಮೃತದೇಹಗಳಾಗಿ ಹೊರಬೀಳುತ್ತಿದ್ದರು.

ಕರ್ನಾಟಕ ರಾಜ್ಯ ಒಂದರಲ್ಲೇ ಕೋವಿಡ್‌ನಿಂದ ಹದಿನೈದು ಸಾವಿರ ಜನ ಸಾವನ್ನಪ್ಪಿದರು. ಅಂದರೆ ಹದಿನೈದು ದೊಡ್ಡ ಸಿನಿಮಾ ಹಾಲ್‌ಗಳು ತುಂಬುವಷ್ಟು ಜನ. ಹೌದು, ಹೀಗೆ ಯೋಚಿಸಿದರೆ ಮಾತ್ರ ನಿಮಗೆ ಅದರ ಕಲ್ಪನೆ ಬರುತ್ತದೆ. ಆ ಹದಿನೈದು ಸಾವಿರ ಜನರನ್ನು ಚಿತ್ರಮಂದಿರದಿಂದ ಹೊರಬರುವಾಗ ಒಟ್ಟುಗೂಡಿಸಿ, ಅವರೆಲ್ಲನ್ನೂ ನಗರದ ಮಧ್ಯದ ಚೌಕಕ್ಕೆ ಕರೆದುಕೊಂಡು ಬರುವಾಗ ಅವರೆಲ್ಲ ಏಕಾಏಕಿ ಸತ್ತು ಬಿದ್ದರೆಂದು ಊಹಿಸಿಕೊಳ್ಳಿ. ಈಗ ಆ ಸಾವಿನ ತೀವ್ರತೆ ಎಷ್ಟೆಂಬುದು ನಿಮಗೆ ಸ್ವಲ್ಪ ಅರ್ಥ ಆಗುತ್ತದೆ, ಅಲ್ಲವೇ?

ಮಾರ್ಚ್, ಏಪ್ರಿಲ್, ಮೇ ತಿಂಗಳಲ್ಲಿ ನಮ್ಮ ಊರು ಕೋವಿಡ್‌ನ ಕಾಲಕೆಳಗೆ ಮುದುರಿಕೊಂಡು ಬಿದ್ದಿತ್ತು. ಅದು ಯಾವಾಗ ಮುಗಿಯುವುದೆಂದು ಕ್ಷಣ, ಗಂಟೆ, ದಿನ, ವಾರ, ತಿಂಗಳು ಲೆಕ್ಕ ಹಾಕುವುದನ್ನು ಬಿಟ್ಟರೆ ನಮ್ಮಿಂದ ಬೇರೇನೂ ಮಾಡುವುದು ಸಾಧ್ಯವಿರಲಿಲ್ಲ. ಊರ ಜನ ಕೋವಿಡ್‌ನೊಂದಿಗೆ ಸಹಜೀವನ ನಡೆಸುವುದನ್ನು ನಿಧಾನವಾಗಿ ಕಲಿತುಕೊಂಡಿದ್ದರು. ಅದಕ್ಕೆ ವಿಧೇಯರಾಗಿ ಬಿಟ್ಟಿದ್ದರು. ಅವರಿಗೆ ಬೇರೆ ಆಯ್ಕೆಯೇ ಇರಲಿಲ್ಲ.

ಒಮ್ಮೆ ಪತ್ರಕರ್ತನೊಬ್ಬ ಯಾವುದೋ ಮಾಹಿತಿಗಾಗಿ ಕಾರ್ಪೊರೇಷನ್‌ನ ನೋಂದಣಿ ವಿಭಾಗದ ಅಧಿಕಾರಿಯ ಮುಂದೆ ಕುಳಿತಿದ್ದ. ಒಬ್ಬ ಬಂದು ಕಾರ್ಡುಗಳ ಕಂತೆ ಇಟ್ಟ. '532' ಅಂತ ಹೇಳಿಹೋದ. 'ಎಷ್ಟು ಅಚ್ಚುಕಟ್ಟಾಗಿ ಇವೆ ಅಲ್ವಾ?' ಎಂದು ಆ ಕಾರ್ಡ್‌ಗಳತ್ತ ನೋಡಿ, ಪತ್ರಕರ್ತ ಕೇಳಿದ. 'ಆದ್ರೆ ಇವು ರಟ್ಟಿನ ಚೀಟಿ ಅಲ್ಲ, ಸಾವು. ನೆನ್ನೆ ದಿನ ಸತ್ತುಹೋದೋರು' ಎಂದ ಆ ಅಧಿಕಾರಿ. 'ಈಗ ನಮಗೆ ಉಳಿದಿರೋದು ಲೆಕ್ಕಾ ಹಾಕೋ ಕೆಲಸ ಮಾತ್ರ' ಎಂದೂ ಆತ ಹೇಳಿದ.

ಪತ್ರಕರ್ತರ ವಿಷಯ ಪ್ರಸ್ತಾಪವಾಗಿದ್ದಕ್ಕೆ ಮಾಧ್ಯಮದ ಕುರಿತು ಇಲ್ಲೇ ಒಂದು ಮಾತನ್ನು ಹೇಳಿಬಿಡುವುದು ವಿಹಿತ. ಟಿ.ವಿ.ಗಳು ಈ ರೋಗದ ವಿಷಯವನ್ನು ಇಟ್ಟುಕೊಂಡು ಹೇವರಿಕೆ ಹುಟ್ಟಿಸುವಷ್ಟು ವರದಿ ಮಾಡಿದವು. ಜನರಲ್ಲಿ ಭೀತಿಯನ್ನೂ ಹುಟ್ಟಿಸಿದವು. ಅವರನ್ನು ಉದ್ರೇಕಗೊಳಿಸಿದವು. ಆರು ತಿಂಗಳಿಗೆ ಆಗುವಷ್ಟು ದಿನಸಿ ತರಲು ಅಂಗಡಿಗಳ ಮುಂದೆ ನಿಲ್ಲುವಂತೆಯೂ ಮಾಡಿದವು. ಏನೇನೋ ಮನೆ ಪ್ರಯೋಗದ ಹುಚ್ಚಾಟಗಳಿಗೂ ಇಳಿಸಿದವು. ಮಾಧ್ಯಮಗಳಿಗೆ ಇಷ್ಟೊಂದು ಹೊಣೆಗೇಡಿತನವೇ ಎಂದು ಡಾ. ರಿಯೂ ಆಶ್ಚರ್ಯಪಟ್ಟರು. ಹೌದು, ದಿನಪತ್ರಿಕೆಗಳ ಗಾತ್ರವೂ ಸಣ್ಣದಾಯಿತು. ಇದ್ದ ಪುಟಗಳಲ್ಲೂ 'ಜನಾನುರಾಗಿ ನಾಯಕರ', 'ದಾನಶೂರ ಕರ್ಣರ' ಪ್ರಾಯೋಜಿತ ವರದಿಗಳೇ ಹೆಚ್ಚಾಗಿದ್ದವು. ಕೋವಿಡ್ ಗೆದ್ದು ಬಂದವರ ಅನುಭವವೇನು, ವೈದ್ಯರು ಹೇಳುವುದೇನು, ಖಿನ್ನತೆಯನ್ನು ಗೆಲ್ಲುವುದು ಹೇಗೆ ಕ್ಲೀಷೆ ಎನಿಸುವಂತಹ ಇಂತಹದ್ದೇ ಲೇಖನಗಳು. ಅದೇ ಅದೇ ವೈದ್ಯರ ಮುಖಗಳು, ಅದೇ ಅದೇ ಪ್ರಶ್ನೆಗಳು. ಬರೆದಿದ್ದನ್ನೇ ಬರೆಯಲು ಈ ಪತ್ರಕರ್ತರಿಗೆ ಬೇಸರವಾಗುವುದಿಲ್ಲವೇ ಎಂದು ಜನ ಮಾತನಾಡಿಕೊಂಡರು. ಏಕೆಂದರೆ, ಓದಿದ್ದನ್ನೇ ಓದಿ ಓದಿ ಅವರಿಗೆ ಬೇಸರವಾಗಿತ್ತು. ಬೇರೆ ವಿದ್ಯಮಾನಗಳು ಇಲ್ಲದೆ ಪತ್ರಿಕೆಗಳ ಸಂಪಾದಕೀಯಗಳಲ್ಲೂ ಪದೇ ಪದೇ ಕೋವಿಡ್ ವಿಷಯವೇ ಮುಖ ತೋರಿಸತೊಡಗಿತು. ಹೊಸ ಸುದ್ದಿಗಳನ್ನು ಹುಡುಕಿಕೊಂಡು ಒಮ್ಮೊಮ್ಮೆ ಪತ್ರಿಕಾ ಛಾಯಾಗ್ರಾಹಕರು ಶವಸಂಸ್ಕಾರ ನಡೆಯುತ್ತಿದ್ದ ಸ್ಮಶಾನಗಳ ಕಡೆಗೆ ಬರುತ್ತಿದ್ದರು.

ವಾಸ್ತವವಾಗಿ ಮೊದಮೊದಲ ದಿನಗಳಲ್ಲಿ ನಾವು ನಡೆಸುತ್ತಿದ್ದ ಶವಸಂಸ್ಕಾರಗಳ ಮುಖ್ಯ ಲಕ್ಷಣವೆಂದರೆ ಅವುಗಳನ್ನು ನಿರ್ವಹಿಸುತ್ತಿದ್ದ ವೇಗ. ಪಿಪಿಇ ಕಿಟ್ ಧರಿಸಿದ ಆಸ್ಪತ್ರೆ ಸಿಬ್ಬಂದಿ, ಸಂಪೂರ್ಣವಾಗಿ ಬಟ್ಟೆಯಿಂದ ಸುತ್ತಿದ ಮೃತದೇಹವನ್ನು ನಿಧಾನವಾಗಿ ಗುಂಡಿಗೆ ಇಳಿಬಿಡುತ್ತಿದ್ದರು. ಅದು ಧಬ್ ಎಂದು ಗುಂಡಿಯ ತಳಕ್ಕೆ ಬೀಳುವವರೆಗೆ ಕಾಯುತ್ತಿದ್ದರು. ಆಮೇಲೆ ದ್ರಾವಣ ಸುರಿದು ಮಣ್ಣು ಮುಚ್ಚುತ್ತಿದ್ದರು. ಆದರೆ, ನಾಲ್ಕಾರು ಶವಗಳನ್ನು ಆಸ್ಪತ್ರೆಯೊಂದರ ಸಿಬ್ಬಂದಿ ಕ್ರೇನ್ ಮೂಲಕ ಗುಂಡಿಗೆ ಒಟ್ಟಿಗೆ ಸುರಿದ ದೃಶ್ಯ ಮೊಬೈಲ್‌ನಲ್ಲಿ ಸೆರೆಯಾಗಿ ದೊಡ್ಡ ರಾದ್ಧಾಂತವೇ ಆಯಿತು. ಹೌದು, ಸಾವು ಕೂಡ ಘನತೆಯಿಂದ ಕೂಡಿರಬೇಕು. ಇಂತಹ ಅಂತ್ಯಕ್ರಿಯೆಯನ್ನು ಯಾರೂ ಒಪ್ಪುವುದಿಲ್ಲ. ವಿಚಿತ್ರ ನೋಡಿ, ಊರಿನ